AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಚಾಮರಸನ ಪ್ರಭುಲಿಂಗಲೀಲೆ

**ಡಾ. ಮೀನಾಕ್ಷಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಮೈಸೂರು–570025
ಮೊ. 9164661535
rmeenakshi92@gmail.com

**ಡಾ. ಹೆಚ್.ಎಂ. ಮಲ್ಲಿಕಾರ್ಜುನ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾಜನ ಪ್ರಥಮ ದರ್ಜೆ ಕಾಲೇಜು
ಜಯಲಕ್ಷ್ಮೀಪುರಂ ಮೈಸೂರು570012
ಮೊ. 8971665734
mallikarjunahm2012@gmail.com

ಚಾಮರಸನ ಕಾಲದಲ್ಲಿ ಕರ್ನಾಟಕವನ್ನು ಆಳುತ್ತಿದ್ದುದು ವಿಜಯನಗರ ಸಾಮ್ರಾಜ್ಯದ ಸಂಗಮವಂಶ ಈ ವಂಶದುದ್ದಕ್ಕೂ ನಿರಾತಂಕವಾಗಿ ಮುನ್ನಡೆದ ವೀರಶೈವಧರ್ಮ ಪ್ರೌಢದೇವರಾಯನ ಕಾಲದಲ್ಲಿ ರಾಜಧರ್ಮವಾಗಿ ಮೆರೆಯಿತು. ಆದರೆ ಚಾಮರಸ ರಾಜಾಶ್ರಯದ ಕವಿಯಲ್ಲವೆಂಬುದು ಗಮನಿಸತಕ್ಕ ಸಂಗತಿಯಾಗಿದೆ.

ಸಾಹಿತ್ಯದ ದೃಷ್ಟಿಯಿಂದ 15ನೆಯ ಶತಮಾನವನ್ನು ವೀರಶೈವ ಪುನರುತ್ಥಾನ ಕಾಲವೆಂದು ಗುರುತಿಸಲಾಗುತ್ತದೆ. ಈ ಸಂದರ್ಭದಲ್ಲಿ 12ನೆಯ ಶತಮಾನದ ಶರಣರ ಚರಿತ್ರೆ, ಶರಣರ ತತ್ವಗಳನ್ನು ಕೃತಿಗೊಳಿಸುವ ಸೃಜನಕ್ರಿಯೆ, ಶರಣರ ಸಾಹಿತ್ಯವನ್ನು ಸಂರಕ್ಷಿಸುವ ಸಂಕಲನ ಕ್ರಿಯೆಗಳು ತುಂಬ ವೇಗವಾಗಿ, ವ್ಯಾಪಕವಾಗಿ ನಡೆಯುತ್ತಲಿದ್ದವು. ಹೀಗೆ ವೀರಶೈವ ಸಾಹಿತ್ಯದ ಚಲನವಲನಗಳ ಮರುಸುಗ್ಗಿಯ ಈ ಕಾಲ ಚಾಮರಸನಿಗೆ ಆಭಾದಿತವಾಗಿದ್ದಿತೆಂದೇ ಹೇಳಬೇಕು. ವೀರಶೈವದೊಂದಿಗೆ ವೈದಿಕ ಕೃತಿಗಳು ಹೆಚ್ಚಾಗಿ ಪ್ರಚಾರದಲ್ಲಿದ್ದವು. ಅವರವರ ಮತದ ಹಿರಿಮೆಯನ್ನು ಹಾಡಿ ಹೊಗಳುವ ಧಾರ್ಮಿಕ ವಾತಾವರಣ ಇತ್ತು. ವಿಲಿಯಂ ಜೇಮ್ಸರ 'ನಾವಾಗ ತಿಳಿದಂತೆ ಧಾರ್ಮಿಕ ಜೀವನ ಚಕ್ರವು ತಿರುಗುವ ಅಷವು, ವ್ಯಕ್ತಿಯು ತನ್ನ ವೈಯಕ್ತಿಕ ಜೀವನದ ಗುರಿಯಲ್ಲಿ ಹೊಂದಿರುವ ಆಸಕ್ತಿಯೇ ಆಗಿರುತ್ತದೆ. ಧರ್ಮವು ಮಾನವನ ಅಹಂಮಿಕೆಯ ಚರಿತ್ರೆಯ ಅತ್ಯಂತ ಮಹತ್ವದ ಘಟ್ಟವಾಗಿದೆ' ಎಂಬ ಈ ಮಾತು ಸಾರ್ವಕಾಲಿಕವಾಗಿದೆ. ಈ ಹಿನ್ನಲೆಯಲ್ಲಿ ಚಾಮರಸ ಅಲ್ಲಮನ ಜೀವನ ಚರಿತ್ರೆಯನ್ನು ತಾನು ಶ್ರದ್ಧೆಯಿಂದ ನಂಬಿದ ಧರ್ಮಕ್ಕೆ ಕುಂದುಬರುವ ರೀತಿಯಲ್ಲಿ ಚಿತ್ರಿಸಿರುವುದು ಸಹಜ. ಆದರೆ ಹರಹರನ ಕಾಲದಿಂದಲೂ ಕೂಡ ಅಲ್ಲಮ್ಮನ ಜೀವನ ಧರ್ಮ ಪ್ರಚಾರದಲ್ಲಿ, ಭಕ್ತಿಯ ಉತ್ಸಾಹದಲ್ಲಿ ಮುಚ್ಚಿ ಹೋಗಿರುವುದನ್ನು ಕಾಣಬಹುದು.

ಕಾವ್ಯಮಾಧ್ಯಮದಲ್ಲಿ ಆಧ್ಯಾತ್ಮಿಕ ಔನ್ನತ್ಯವನ್ನು ಔಚಿತ್ಯಪೂರ್ಣವಾಗಿ ಮೂಡಿಸಿರುವ ಅಗ್ರಗಣ್ಯರಾದ ಕವಿಗಳಲ್ಲಿ ಚಾಮರಸನೂ ಒಬ್ಬ ಅವನು ತನ್ನ ವ್ಯಕ್ತಿತ್ವವನ್ನು ಕವಿತ್ವದಲ್ಲಿ ಮೂಡಿಸಿರುವುದನ್ನು ಗುರುತಿಸ ಬಹುದಾಗಿದೆ ಪ್ರಭುಲಿಂಗಲೀಲೆಯಲ್ಲಿ ಅವನು ನಿರೂಪಿಸಿರುವ ವೀರಶೈವ ಮತದ ತತ್ವ ನಿರೂಪಣೆಯ ವೈಖರಿಯನ್ನು ಗಮನಿಸಿದರೆ ಪ್ರಭುದೇವನಂತೆ ಅವನೂ ಒಬ್ಬ ಸಾಧಕನೇ ಇರಬೇಕು ಊಹೆ ಗರಿಕೆದರುತ್ತದೆ. ಚಾಮರಸನು ತನ್ನ ಕಾವ್ಯದಲ್ಲಿ ಎಲ್ಲಿಯೂ ತನ್ನ ಕಾಲ, ದೇಶ, ಕೃತಿಗಳ ಬಗ್ಗೆ ಹೇಳಿಕೊಂಡಿಲ್ಲ. ಕನ್ನಡದ ಸಿದ್ದನಂಜೇಶ ಮತ್ತಿತರರ ಹೇಳಿಕೆಗಳಿಂದ ನಾವು ಚಾಮರಸನು ಪ್ರಭುಲಿಂಗಲೀಲೆಯನ್ನು ಬರೆದಿದ್ದಾನೆಂದು, ವೀರಶೈವಕವಿಯೆಂದೂ, ಕ್ರಿ.ಶ. ಸುಮಾರು 1430 ಈತನ ಕಾಲವೆಂದೂ ಹೇಳಲಾಗಿದೆ. ಚಾಮರಸನು ಪ್ರೌಢದೇವರಾಯನ ಆಸ್ಥಾನದ ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದು, ವೀರಶೈವ ಪುನರುಜ್ಜೀವನ ಕಾರ್ಯದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದವನು. ಈತನಿಗೆ 'ವೀರಾಶೈವಾಚಾರ ಸರೋಧಾರ', 'ಅನ್ಯಮತ ಕೋಳಾಹಳ' ಎಂಬ ವಿಶೇಷಣಗಳು ಇದ್ದವೆಂದು ತಿಳಿದು ಬರುತ್ತದೆ. ಗದುಗಿನ ನಾರಣಪ್ಪನು ಚಾಮರಸನ ತಂಗಿ ಗಂಡನೆಂದೂ, ಚಾಮರಸನು ಬರೆದ ಭಾರತವನ್ನು ತನ್ನ ಗಂಡನ ಮನಸಂತೋಷಕ್ಕಾಗಿ ಸುಟ್ಟುಹಾಕಿದಳೆಂದು ಇದರಿಂದ ನೊಂದ ಚಾಮರಸನು 11 ದಿನಗಳಲ್ಲಿ 1111 ಪದ್ಯಗಳನ್ನೊಳಗೊಂಡ ಪ್ರಭುಲಿಂಗಲೀಲೆಯನ್ನು ಬರೆದನೆಂದು ವೀರಶೈವ ಪುರಾಣಗಳಿಂದ ತಿಳಿದುಬರುತ್ತದೆ.

"ದೇಗುಲವೆ ಮಾತಾಡುವಂದದೋ
ಳಾಗಿರದೆ ಒಳಗಿರ್ದು ನುಡಿದಡೆ
ಲೋಗರಿಗೆ ಪ್ರತಿಶಬ್ಧದಿಂದಾ ಪರಿಯಲೆನ್ನೊಳಗೆ
ಲಾಗಿನಿಂದಲಿ ಗುರು ಗುಹೇಶ್ವರ
ನಾಗಳೆನ್ನನು ನುಡಿಸಿದಡೆ ನುಡಿ
ದಾಗುಮಾಡಿಯೆ ಪೇಳ್ದನೀ ಪ್ರಭುಲಿಂಗಲೀಲೆಯನು"[1]

ಎಂದು ಹೇಳಿದ್ದಾನೆ ಪ್ರಭುಲಿಂಗಲೀಲೆಯ ಕಥನ ಪ್ರಾರಂಭವಾಗುವುದು ಹಾಗೂ ಅಂತ್ಯವಾಗುವುದು ಕೈಲಾಸದಿಂದ. ಅದು ಶಿವ ಮತ್ತು ಗಿರಿಜೆಯರ ನಡುವೆ ನಡೆದ ಪಂದ್ಯದ ಕಥನವನ್ನು ಒಳಗೊಂಡಿದೆ. ಒಮ್ಮೆ ಗಿರಿಜೆ ಶಿವನನ್ನು ಕುರಿತು ನಿನ್ನ ಒಡ್ಡೋಲಗದಲ್ಲಿ ಶೋಭಿಸುವ

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಘನಾಮಹಿಮರೆಲ್ಲರು ಮರ್ತ್ಯ ಬಾರದೆ ನಿತ್ಯ ಸುಖದಿಂದಿರುವರೋ ಇಲ್ಲವೇ ಇವರಿಗೆಯು ನಿಶ್ಚಿತ ನೆಲೆಯಲ್ಲವೆ ಎಂದು ಕೇಳುವಳು. ಆಗ ಶಿವನು ನಾಮ, ರೂಪ, ಕ್ರಿಯೆಗಳನ್ನು ಗೆಲ್ಲಬಲ್ಲವರಿಗೆ ಮಾತ್ರ ನಿತ್ಯಸುಖವೆಂದು ಅದಕ್ಕಾಗಿ ಮಾನವ ಶರೀರದಿಂದ ಜನಿಸಿ ಸಾಧನೆ ಮಾಡುಬೇಕೆಂದು ಹೇಳುವನು. ಹಾಗಾದರೆ ಭೂಲೋಕದಲ್ಲಿ ಇದನ್ನು ಭೋದಿಸುವ ಗುರುವು ಯಾರು ಎಂದು ಕೇಳಲು ಈಶ್ವರನು ಅಲ್ಲಮನೇ ಆಗಿರುವನೆಂದು, ಆತನು ಅನುಭವನೆಂದು ಆತನಗುಣವನ್ನು ಹೊಗಳುವನು. ಆಗ ಪಾರ್ವತಿ ಅಲ್ಲಮನನ್ನು ತಾನು ವಶಪಡಿಸಿಕೊಂಡು ನಿಜತತ್ವವನ್ನು ತಿಳಿಯುವುದಾಗಿ ಪ್ರತಿಜ್ಞೆ ಮಾಡಿ ತಾಮಸ ಗುಣದ ಮೂರ್ತಿಯಾದ ಮಾಯೆಯನ್ನು ಆಕಾರ್ಯಕ್ಕೆ ನಿಯೋಜಿಸುವಳು.

ಶಿವಪಾರ್ವತಿಯರ ಪ್ರತಿಜ್ಞೆಯ ನಿರ್ಣಾಯಕರಂಗ ಮರ್ತ್ಯವಾಗುತ್ತದೆ. ಅಲ್ಲಿ ಶಿವನ ಸಾತ್ವಿಕ ಮೂರ್ತಿಯಾಗಿ ಅಲ್ಲಮ, ಪಾರ್ವತಿಯ ತಾಮಸಿಕ ಮೂರ್ತಿಯಾಗಿ ಮಾಯೆ ಮರ್ತ್ಯದಲ್ಲಿ ಜನಿಸಿ ಅಲ್ಲಮನನ್ನು ಗೆಲ್ಲಲಾಗದೆ ಮರಳಿ ಮರ್ತ್ಯದಲ್ಲಿ ಅಕ್ಕಮಹಾದೇವಿಯಾಗಿ ಜನಿಸಿ ತನ್ನ ಸಾತ್ವಿಕ ಗುಣದಿಂದ ಅಲ್ಲಮನ ಕೃಪೆಗೆ ಪಾತ್ರಳಾಗುವಳು.

ಅಲ್ಲಮಪ್ರಭುವು ಗೊಗ್ಗಯ್ಯನೆಂಬ ಭಕ್ತನನ್ನು ಉದ್ಧರಿಸುತ್ತಾನೆ. ಮುಕ್ತಾಯಕ್ಕನಿಗೆ ಧರ್ಮೋಪದೇಶ ಮಾಡುತ್ತಾನೆ. ಸಿದ್ಧರಾಮನನ್ನು ಉದ್ಧರಿಸುತ್ತಾನೆ. ವಜ್ರದೇಹಿ– ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಗೋರಕ್ಷಕನೆಂಬ ಸಿದ್ಧನಿಗೆ 'ಕಾಯ ಒಲಿದೆಡೆ ಮಾಯೆ ಒಲಿವುದು, ಮಾಯೆ ಒಲಿದೆಡೆ ಛಾಯೆ ಒಲಿವುದು, ಕಾಯ ಮಾಯಾ ಛಾಯೆ ಒಲಿದೆಡೆ ಸಿದ್ಧವಲನಲ್ಲಿ; ಕಾಯಮಾಯಾ ಛಾಯೆ ಯೊಳಗಿನ ದಾಯವನ್ನು ಗೆಲುವವನೇ ಮುಕ್ತ' ಎಂದು ಭೋಧಿಸುವನು ನಂತರ ಕಲ್ಯಾಣದಲ್ಲಿ ಬಸವಣ್ಣ ನಿರ್ಮಿಸಿದ ಶೂನ್ಯ ಸಿಂಹಾಸನದಲ್ಲಿ ಕುಳಿತು ಧರ್ಮೋಪದೇಶ ಮಾಡಿ 'ಜಂಗಮತೃಪ್ತಿ ಜಗತ್ತಿನ ತೃಪ್ತಿ' ಎಂಬ ಸತ್ಯವನ್ನು ಪವಾಡದ ಮೂಲಕ ಸ್ಥಾಪಿಸಿ ಶರಣರೆಲ್ಲರನ್ನು ಉದ್ಧರಿಸಿದನು. 'ಕೊಂದವನಿಗೆ ಕೊಲೆತಪ್ಪದು' ಈ ಕೋಟಲೆಯ ಪಾತಕ ತಪ್ಪಬೇಕಾದರೆ ಮಾಡುವವನೂ ಮಾಡಿಸಿಕೊಂಬಾತನೂ ಲಿಂಗದೇವನೆ– ಎಂಬ ಸರ್ವಾರ್ಪಣ ಭಾವನೆಯಿಂದ ಕಾಯಕವನ್ನು ನೆರವೇರಿಸಬೇಕೆಂಬ ತತ್ವವನ್ನು ತಿಳಿಸುವನು.

ಒಟ್ಟಾರೆಯಾಗಿ ಚಾಮರಸನು ಕಾವ್ಯಧರ್ಮ, ಧರ್ಮಗಳನ್ನು ಸಮರಸವಾಗಿ ಬೆರಸಿ ಕೃತಿ ರಚನೆ ಮಾಡಿದ್ದಾನೆ. ಇಲ್ಲಿ ಬರುವ ಪಾತ್ರಗಳೆಲ್ಲ ಸಜೀವವಾಗಿವೆ. "ಅಲ್ಲಮನು ಕಾಮಿಯಂತೆ ಸಾಮಾನ್ಯನಂತೆ ಸಾಮಾನ್ಯ ಜನಕ್ಕೆ ತೋರುವನು. ಆದರೆ ನಿಜವಾಗಿಯೂ ಅವನು ನಿರ್ಮಾಯನು, ಈಶ್ವರ ಸ್ವರೂಪನು ಎಂಬುದನ್ನು ಇಲ್ಲಿಯ ಕಲ್ಪನೆ ತಿಳಿಸುತ್ತದೆ."[2] ಎಂಬ ರಂ.ಶ್ರೀ ಮುಗಳಿಯವರ ಮಾತು ಗಮನಾರ್ಹವಾಗಿದೆ. ಈ ಕಾವ್ಯದಲ್ಲಿರುವ ಸನ್ನಿವೇಶಗಳ ರಚನೆ ಅಲ್ಲಮನ ವ್ಯಕ್ತಿತ್ವವನ್ನು ಮಹೋನ್ನತಿಗೆ ಏರಿಸುವುದರರ ಜೊತೆಗೆ ರಸವತ್ತಾದ ಕಾವ್ಯಸ್ವಾದವನ್ನು ಸಹೃದಯರಿಗೆ ನೀಡುತ್ತದೆ ಎಂದು ಹೇಳಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಪ್ರಭುಲಿಂಗಲೀಲೆಯ ಸಂಗ್ರಹ: ಸಂ: ಎಂ.ಎಸ್. ಬಸವಲಿಂಗಯ್ಯ ಮತ್ತು ಎಂ.ಆರ್. ಶ್ರೀನಿವಾಸಮೂರ್ತಿ. ಪು.ಸಂ 1
2. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ ಮುಗಳಿ, ಪು.ಸಂ 294

**ಪರಾಮರ್ಶನ ಗ್ರಂಥಗಳು**

1. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ ಮುಗಳಿ
2. ಪ್ರಭುಲಿಂಗಲೀಲೆ ಸಂಗ್ರಹ: ಬಿ.ಎಂ. ಶ್ರೀಕಂಠಯ್ಯ.
3. ಚಾಮರಸಕೃತ ಪ್ರಭುಲಿಂಗಲೀಲೆ (ಭಾಗ–1): ಸಂಪಾದಕರು: ಆರ್.ಸಿ. ಹಿರೇಮಠ, ಎಮ್.ಎಸ್. ಸುಂಕಾಪುರ
4. ಚಾಮರಸ ಕವಿಯ ಪ್ರಭುಲಿಂಗಲೀಲೆ ಗದ್ಯಾನುವಾದ ಮತ್ತು ಕಾವ್ಯ ವಿಮರ್ಶೆ: ಲೇಖಕರು: ಪ್ರೋ. ಬಿ.ಸಿ ಜವಳಿ ಎಮ್.ಎ ಮತ್ತು ಶ್ರೀಮಲ್ಲಾಬಾದಿ ವೀರಭದ್ರಪ್ಪ.
5. ಪ್ರಭುಲಿಂಗಲೀಲೆಯ ಸಂಗ್ರಹ: ಸಂ: ಎಂ.ಎಸ್. ಬಸವಲಿಂಗಯ್ಯ ಮತ್ತು ಎಂ.ಆರ್. ಶ್ರೀನಿವಾಸಮೂರ್ತಿ.